ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ಸಭಾಧ್ಯಕ್ಷರವರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 02/03/2020

# ಶಾಸಕರಿಗೆ ಸ್ಪೀಕರ್ ಎಚ್ಚರಿಕೆ

ಬೆಂಗಳೂರು: ಶಾಸಕರು ತಮ್ಮ ಖಾಸಗಿ ವಾಹನಗಳ ನೋಂದಣಿ ಫಲಕಗಳ ಮೇಲೆ ಹೆಸರು, ಚಿಹ್ನೆ ಹಾಕಿಕೊಳ್ಳುವುದು ಕಾನೂನು ಬಾಹಿರ. ಕೂಡಲೇ ತೆರವುಗೊಳಿಸಿ ಎಂದು ಸ್ಪೀಕರ್ ಎಚ್ಚರಿಸಿದ್ದಾರೆ.

» **ನೋಂದಣಿ ಫಲಕಗಳ ಮೇಲಿನ ಹೆಸರು, ಚಿಹ್ನೆ ಲಾಂಛನ ತೆರವಿಗೆ ಸೂಚನೆ**

ಮೋಟಾರು ವಾಹನ ಕಾಯ್ದೆ ರೀತ್ಯ ಫಲಕಗಳ ಮೇಲೆ ಹೆಸರು, ಚಿಹ್ನೆ/ಲಾಂಛನ ಹಾಕಿಕೊಳ್ಳುವುದು ಅನಧಿಕೃತವೆಂದು ಸಾರಿಗೆ ಇಲಾಖೆ ತಿಳಿಸಿ, ಅಂತಹವುಗಳನ್ನು ತೆರವುಗೊಳಿಸುವಂತೆ ಪ್ರಕಟಣೆ ನೀಡಿತ್ತು. ಆದಾಗ್ಯೂ ಅಂತಹ ನೋಂದಣಿ ಫಲಕ ಪ್ರದರ್ಶಿಸಿಕೊಂಡು ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ಹೈಕೋರ್ಟ್ ಗಮನಿಸಿದೆ. ಈ ಕುರಿತು ಸಾರ್ವಜನಿಕ ಹಿತಾಸಕ್ತಿ ದಾವೆ ವಿಚಾರಣೆ ನಡೆಸಿದ ನ್ಯಾಯಾಧೀಶರು, ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರು ವಾಹನಗಳ ಮೇಲೆ ಹೆಸರು, ಚಿಹ್ನೆ, ಸಂಘ-ಸಂಸ್ಥೆಗಳ ಹೆಸರು ಹಾಕಿಕೊಳ್ಳುವುದನ್ನು ನಿರ್ಬಂಧಿಸಲು ಕ್ರಮಕೈಗೊಳ್ಳಬೇಕೆಂದು ಆದೇಶಿಸಿದ್ದರ ಹಿನ್ನೆಲೆ ಸ್ಪೀಕರ್, ಈ ಎಚ್ಚರಿಕೆ ರವಾನಿಸಿದ್ದಾರೆ. ಸ್ಪೀಕರ್ ಸೂಚನೆಯಂತೆ ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ, ಕಾನೂನುಬಾಹಿರ ನೋಂದಣಿ ಫಲಕಗಳನ್ನು ತೆರವುಗೊಳಿಸಲು ತಿಳಿಸಿದ್ದಾರೆ.